ಬಳ್ಳಾರಿಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರಿಂದ ಎಂ. ಐ. ಜಿ. ಮನೆಗಳನ್ನು ನಿರ್ಮಿಸುವುದು

೯೫. ಶ್ರೀ ಎಂ. (ರಾಮಪ್ಪ) ಬಳ್ಳಾರಿ— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿಯ ಸತ್ಯನಾರಾಯಣ ಪೇಟೆಯಲ್ಲಿ ಗೃಹ ಮಂಡಳಿಯಿಂದ ೧೯೭೫ ರಿಂದ ೧೯೮೦ರ ವರೆಗೆ ಮಧ್ಯಮ ಆದಾಯ ವರ್ಗದವರಿಗೂ ಹಾಗೂ ಕಡಿಮೆ ಆದಾಯ ವರ್ಗದವರಿಗೂ ಕಟ್ಟಿಸಲಾದ ಮನೆಗಳು ಕಳಪೆ ಗುಣಮಟ್ಟದವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇಂತಹ ಕಳಪೆ ಗುಣಮಟ್ಟಕ್ಕೆ ಹೊಣೆಯಾಗಿರತಕ್ಕ ಇಂಜಿನಿಯರುಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಪಿ. ಜಿ. ಆರ್. ಸಿಧ್ಯಾ (ಮಾನ್ಯ ವಸತಿ ಮತ್ತು ಸಾರಿಗೆಯ ರಾಜ್ಯ ಮಂತ್ರಿಯವರು).—

ಅ) ಹೌದು —

ಆ) ಹೌದು. ಇಬ್ಬರು ಸಹಾಯಕ ನಿರ್ವಾಹಕ ಅಭಿಯಂತರು ಮತ್ತು ಒಬ್ಬರು ಸಹಾಯಕ ಅಭಿಯಂತರರನ್ನು ಹೊಣೆ ಮಾಡಲಾಗಿದೆ ಮತ್ತು ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಸ್ವಲ್ಪ ತಿಳಿಸುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ ಈ ಪ್ರಕರಣ ನಡೆದಿರತಕ್ಕಂಥದ್ದು ೧೯೭೮ ರಲ್ಲಿ. ಇಲಾಖೆಯ ವಿಚಾರಣೆ ಮಾಡಿದ್ದೇವೆ. ಇಲಾಖೆಯಲ್ಲಿ ವಿಚಾರಣೆ ಆದ ಮೇಲೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಇವರ ಅಧ್ಯಕ್ಷತೆಯಿಂದ ಹೌಸಿಂಗ್ ಬೋರ್ಡ್‌ನಲ್ಲಿ ಲುಕ್ಸಾನು ಆಗಿದೆ ಎಂದು ಕಂಡು ಬಂದಿದೆ. ಈ ಹಣವನ್ನು ಅವರಿಂದ ವಸೂಲಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ಇವರನ್ನು ಹೌಸಿಂಗ್ ಬೋರ್ಡ್‌ನಿಂದ ಪಿ. ಡಬ್ಲ್ಯೂ. ಡಿ. ಗೆ ವಾಪಸ್ಸು ೧೯೭೮ ರಲ್ಲಿ ಕಳಿಸಿದ್ದೇವೆ ಈ ಪ್ರಕರಣ ನನ್ನ ಗಮನಕ್ಕೆ ಬಂದ ನಂತರ ಕ್ರಮ ತೆಗೆದುಕೊಂಡಿದ್ದೇವೆ ೧೯೭೮ ರಲ್ಲಿ ಅವರನ್ನು ಪಿ. ಡಬ್ಲ್ಯೂ. ಡಿ ಗೆ ವಾಪಸ್ಸು ಕಳಿಸಿದ್ದರು. ವೀರಭದ್ರಯ್ಯ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರ ಫೈಲ್ ಮಾಯ್ಚಿಬಿಟ್ಟಿದ್ದರು. ಹೌಸಿಂಗ್ ಬೋರ್ಡ್ ಕಮಿಷನರ್‌ನ್ನು ಕರೆಸಿ ನಾನು ಮಾತನಾಡಿದ್ದೇನೆ. ಕನಿಷ್ಟಪಕ್ಷ ಅವರಿಂದ ಹಣವನ್ನು ವಸೂಲು ಮಾಡುವುದಕ್ಕೆ ಆಗಿಲ್ಲ. ಈಗ ತಾನೇ ಈ ವಿಷಯದ್ದು ಸಂಪೂರ್ಣ ವಿವರಗಳನ್ನು ನನ್ನ ಗಮನಕ್ಕೆ ತಂದಿದ್ದೀರಿ ಆದಕ್ಕಾಗಿ ನಾವು ಸದಸ್ಯರನ್ನು ಅಭಿನಂದಿಸುತ್ತೇನೆ. ಮತ್ತೆ ಬಳ್ಳಾರಿಗೆ ಅವರಿಗೆ ರೆಗ್ಯುಲರ್ ಪೋಸ್ಟಿಂಗ್ಸ್ ಸಿ. ಅಂಡ್ ಬಿ. ಗೆ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ ಆದ್ದರಿಂದ ಈ ತಕ್ಷಣವೇ ನಮ್ಮ ಲೋಕೋಪಯೋಗಿ ಮಂತ್ರಿಗಳಿಗೆ ಮತ್ತು ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಕಾನೂನು ಪ್ರಕಾರ ಕೂಡಲೇ ಅವರುಗಳ ಮೇಲೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಈ ಸದನದಲ್ಲಿ ನಾನು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎಂ. ರಾಮಪ್ಪ —ಹೌಸಿಂಗ್ ಬೋರ್ಡ್‌ನಲ್ಲಿರುವ ಎಲ್ಲಾ ಮನೆಗಳನ್ನು ತಾವು ನೋಡಿದೂರು ಕೊಟ್ಟಿರತಕ್ಕಂಥ ಮನೆಗಳು ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ? ಎಲ್ಲ ಮನೆಗಳ ಬಗ್ಗೆಯೂ ಕೂಡ ಕ್ರಮ ತೆಗೆದುಕೊಳ್ಳುತ್ತೀರಾ ? ಏಕೆಂದರೆ ಅಲ್ಲಿರುವ ಮನೆಗಳು ಬೀಳುವ ಪರಿಸ್ಥಿತಿಯಲ್ಲಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ —ನಾನ್ಯ ಅಧ್ಯಕ್ಷರೇ ಸದಸ್ಯರು ಹೇಳತಕ್ಕಂಥದ್ದು ಸತ್ಯವಾದ ಮಾತು. ಹೌಸಿಂಗ್ ಬೋರ್ಡ್‌ನಲ್ಲಿ ಬಹಳ ಮನೆಗಳ ಕಳಪೆಯಾಗಿವೆ. ಅದನ್ನು ನಾನು ಒಪ್ಪುತ್ತೇನೆ. ದೂರು ಬಾರದೇ ಹೋದರೆ ಏನು ಮಾಡುವುದು ? ಇ. ಡಬ್ಲ್ಯೂ. ಎಸ್. ಮನೆಗಳಲ್ಲಾಂತೂ ಮಿಡಿತವಾಗಿಯೂ ಮನುಷ್ಯರು ಬದುಕಿರಲಿಕ್ಕೆ ಆಗುವುದಿಲ್ಲ. ನಾನೇ ಎಷ್ಟೋ ಬಾರಿ ಅಲ್ಲಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡುವುದಕ್ಕೂ ಹೆದರಿದ್ದೇನೆ. ಕಳೆದ ಎರಡು ವರ್ಷಗಳಿಂದ ಸ್ವಲ್ಪ ಮಟ್ಟಿಗೆ ಕ್ವಾಲಿಟಿ

ಉತ್ತಮವಾಗಿದೆ ಎಂದು ಕಾಣುತ್ತದೆ. ಆದನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ತೀರ ಕಳಪೆ ಮನೆಗಳು ಇದ್ದರೆ ಅದನ್ನು ಬದಲಿಸಿ ಹೊಸ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ.—ಮನೆಗಳ ಸ್ವಾಧೀನವನ್ನು ಏನೋ ಕೊಟ್ಟಿದ್ದೀರಿ ಆದರೆ ಆ ಮನೆಗಳು ಬೀಳುವ ಪರಿಸ್ಥಿತಿಯಲ್ಲಿದ್ದರೂ ಸಹ ಆ ಮನೆಗಳ ಮೇಲೂ ಕಂತನ್ನು ವಸೂಲು ಮಾಡುತ್ತಿದ್ದಾರೆ. ಕಂತುಗಳನ್ನು ಕೊಡಲೇಬೇಕಾಗುತ್ತದೆ. ನೀವುಗಳು ಯಾವ ರೀತಿ ಅವರಿಂದ ಕಂತುಗಳನ್ನು ಕಟ್ಟಿಸಿ ಕೊಳ್ಳುತ್ತೀರಿ ? ಇದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಪಿ ಜೆ. ಆರ್. ಸಿಂಧ್ಯಾ,—ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಟ್ಟರೆ ಆದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಂಗಾರಪ್ಪ.—ಕಳಪೆ ಮನೆಗಳು. ಕ್ವಾಲಿಟಿ ಚೆನಾಗಿಲ್ಲ ಎಂದು ತಾವು ಆಗಲೇ ಒಪ್ಪಿಕೊಂಡಿದ್ದೀರಿ. ಹಣ ವಸೂಲು ಮಾಡುವುದಕ್ಕೆ ಪ್ರತಿ ತಿಂಗಳು ನೋಟೀಸ್ ಕೊಡುತ್ತೀರಿ. ಹೀಗೆ ಹಣ ವಸೂಲು ಮಾಡತಕ್ಕಂಥ ಕ್ರಮ ನಿಲ್ಲಿಸಿ. ಒಳ್ಳೆಯ ಮನೆಗಳು ಇದ್ದರೆ ವಸೂಲು ಮಾಡಿ. ಮನೆ ಬಿದ್ದರೆ ಸತ್ತು ಹೋದ ಹೆಣದ ಮೇಲೆ ಹಣ ವಸೂಲು ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಪಿ. ಜೆ. ಆರ್, ಸಿಂಧ್ಯಾ.—ಆ ಬಗ್ಗೆ ವಿಚಾರ ಮಾಡುತ್ತೇನೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಗೆ ಆಕ್ಟ್ರಾಯ್ ಪರಿಹಾರ ನೀಡಿಕೆ

೪೫೯. ಶ್ರೀ ಎ ಎಂ. ಹಿಂಡಸಗೇರಿ (ಹುಬ್ಬಳ್ಳಿನಗರ) ಹಾಗೂ ಶ್ರೀ ಕೆ. ಹೆಚ್. ಪಾಟೀಲ್—(ಗದಗ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಸಭೆಗೆ ಸರಕಾರವು ೫೫ ಲಕ್ಷ ರೂಪಾಯಿಗಳನ್ನು ಸಾಲದ ರೂಪವಾಗಿ ದಿನಾಂಕ ೨–೧೦–೧೯೫೫ ರಂದು ಮಂಜೂರು ಮಾಡಿದ್ದು ನಿಜವೆ,

ಆ) ಈ ಮೇಲಿನ ಸಾಲಕ್ಕೆ ಹುಬ್ಬಳ್ಳಿ–ಧಾರವಾಡ ಮಹಾನಗರ ಸಭೆಯು ಬೇಡಿಕೆ ಇದ್ದಿತೆ,

ಇ) ಹಾಗಿದ್ದರೆ, ಹುಬ್ಬಳ್ಳಿ–ಧಾರವಾಡ ಮಹಾನಗರಸಭೆಯು ತರಾವಿನ ಪ್ರತಿಯನ್ನು ಒದಗಿಸಿರಿ.

ಈ) ಹುಬ್ಬಳ್ಳಿ ಧಾರವಾಡ ಮಹಾನಗರಸಭೆಗೆ ೧೯೭೮ ರಿಂದ ೧೯೮೪–೮೫ ರ ವರೆಗೆ ಮಂಜೂರು ಮಾಡಿದ ಆಕ್ಟ್ರಾಯ್ ಪರಿಹಾರ ಧನ(ವರ್ಷವಾರು ಅಂಕಿಗಳನ್ನು ಒದಗಿಸುವುದು),

ಉ) ಸರ್ಕಾರದಿಂದ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ೨.೫ ಕೋಟಿ ರೂಪಾಯಿಗಳಷ್ಟು ಜಕಾತಿ ಪರಿಹಾರ ನೀಡಬೇಕಾದುದು ನಿಜವೆ, ಹಾಗಿದ್ದರೆ ಸರ್ಕಾರವು ಹುಬ್ಬಳ್ಳಿ ಧಾರವಾಡ ಮಹಾನಗರಸಭೆಯ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಲು ಏನಾದರೂ ಕ್ರಮಗಳನ್ನು ತೆಗೆದುಕೊಂಡಿದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ನಗರಾಭಿವೃದ್ಧಿಯ ಮಂತ್ರಿಗಳು)

ಅ) ನಿಜ.

ಆ) ಇಲ್ಲ. ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಆಯುಕ್ತರು ೫೦ ಲಕ್ಷ ರೂಪಾಯಿಯ ವಿಶೇಷ ಅನುದಾನವನ್ನು ಮಂಜೂರು ಮಾಡಲು ಕೋರಿದ್ದರು.

ಇ) ಹುಬ್ಬಳ್ಳಿ ಧಾರವಾಡ ಮಹಾನಗರಸಭೆಯು ಯಾವ ತರಾವನ್ನೂ ಮಾಡಿರಲಿಲ್ಲ. ಆದುದರಿಂದ ತರಾವಿನ ಪ್ರತಿಯನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಹುಬ್ಬಳ್ಳಿ–ಧಾರವಾಡ ಮಹಾನಗರಸಭೆಗೆ ವರ್ಷವಾರು ಜಕಾತಿ ಪರಿಹಾರ ಧನ ಮಂಜೂರಾತಿ ಮಾಡಿದುದು ಈ ಕೆಳಕಂಡಂತಿದೆ.—